**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ: ಸಿ1(8) ವಾ.ಕಾ.ನಿ.ವ(SPARROW) 85/2016-17 ದಿನಾಂಕ: 18-11-2016

**"ನೆನಪೋಲೆ"**

:: ಜ್ಞಾಪನ ::

ವಿಷಯ : ಗ್ರೂಪ್-'ಎ' ಮತ್ತು 'ಬಿ' ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಆನ್‌ಲೈನ್ ತಂತ್ರಾಂಶ (SPARROW) ಕ್ಕೆ ಅಳವಡಿಸುವ ಬಗ್ಗೆ.

ಉಲ್ಲೇಖ : ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ : ಸಿ1(8) ವಾ.ಕಾ.ನಿ.ವ(ಸ್ಪಾರೋ) 85/2016-17, ದಿನಾಂಕ : 18-10-2016.

-*-*-*-*-*-

ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-'ಎ' ಮತ್ತು ಗ್ರೂಪ್-'ಬಿ' ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಆನ್‌ಲೈನ್‌ನಲ್ಲಿ ಅಳವಡಿಸುವ ಸಲುವಾಗಿ ಎನ್.ಐ.ಸಿ ವತಿಯಿಂದ ಅಭಿವೃದ್ಧಿಗೊಳಿಸಿರುವ **SPARROW** ತಂತ್ರಾಂಶವನ್ನು ಬಳಸಲು ಉದ್ದೇಶಿಸಲಾಗಿದೆ.

ಈ ಸಂಬಂಧವಾಗಿ ಎಲ್ಲಾ ಅಧಿಕಾರಿಗಳಿಗೂ ಸರ್ಕಾರದ ವತಿಯಿಂದ ಯೂಸರ್ ಐ.ಡಿ ಯನ್ನು ಸೃಜಿಸಬೇಕಾಗಿದ್ದು, ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್-'ಎ' ಮತ್ತು ಗ್ರೂಪ್-'ಬಿ' ಅಧಿಕಾರಿಗಳ (ಸಿ.ಟಿ.ಇ, ಡಯಟ್, ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ್ ಹಾಗೂ ಇತರೆ ಕಛೇರಿಗಳನ್ನು ಒಳಗೊಂಡಂತೆ) ಮಾಹಿತಿಯನ್ನು ನಿಗದಿತ ಎಕ್ಸೆಲ್ ನಮೂನೆಯಲ್ಲಿ ಭರ್ತಿ ಮಾಡಿ ದಿನಾಂಕ : 28-10-2016 ರೊಳಗಾಗಿ **sadpiegov.ka@nic.in** ಇ-ಮೇಲ್ ಐ.ಡಿಗೆ ಕಳುಹಿಸಲು ಮತ್ತು ಸಹಿ ಮಾಡಿದ ಪ್ರತಿಯನ್ನು ಶ್ರೀ ಕಮಲಾಕರ ಟಿ.ಎನ್, ಹಿರಿಯ ಸಹಾಯಕ ನಿರ್ದೇಶಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು. ಇವರ ವಿಳಾಸಕ್ಕೆ ಕಳುಹಿಸಲು ಸೂಚಿಸಲಾಗಿತ್ತು.

ಆದರೆ ಇದುವರೆವಿಗೂ ಕ್ರೋಢೀಕೃತ ಮಾಹಿತಿಯನ್ನು ಕಳುಹಿಸಿಕೊಡದಿರುವುದು ವಿಷಾದನೀಯ ಸಂಗತಿಯಾಗಿದೆ. ಈ ಬಗ್ಗೆ **ಜಿಲ್ಲೆಯ ಎಲ್ಲಾ ಉಪನಿರ್ದೇಶಕರುಗಳು** ತುರ್ತಾಗಿ ವೈಯಕ್ತಿಕ ಗಮನ ಹರಿಸಿ ತಮ್ಮ ಜಿಲ್ಲೆಯ ಮಾಹಿತಿಯನ್ನು ಕ್ರೋಢೀಕರಿಸಿ ಈ ಕಛೇರಿಗೆ ದಿನಾಂಕ : 30-11-2016 ರೊಳಗೆ ಕಳುಹಿಸುವುದು ಇದಕ್ಕೆ ತಪ್ಪಿದ್ದಲ್ಲಿ ಮಾಹಿತಿಯನ್ನು ನೀಡದ ಜಿಲ್ಲಾ ಉಪನಿರ್ದೇಶಕರುಗಳ ಹೆಸರುಗಳನ್ನು ಮಾನ್ಯ ಆಯುಕ್ತರ ಗಮನಕ್ಕೆ ತರಲಾಗುವುದು.

[ಎಸ್. ಕಾತ್ಯಾಯನಿದೇವಿ]
ಜಂಟಿ ನಿರ್ದೇಶಕರು(ಆಡಳಿತ)

18-11-16 18.11.16 18/11/16

ಇವರಿಗೆ :-

1. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
2. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
3. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ.
4. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ವ್ಯಾಪ್ತಿಯಲ್ಲಿನ ಸಂಬಂಧಿಸಿದ ಅಧಿಕಾರಿಗಳ ಮಾಹಿತಿಗಳನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸತಕ್ಕದ್ದು.
5. ಕಛೇರಿ ಪ್ರತಿ.